ರಸೀತಿಯನ್ನೂ ಕೂಲಂಕಶವಾಗಿ ನೋಡಿ ಅದು ಅಸಲಿ ಎಂಬುದನ್ನು ದೃಢಪಡಿಸಿಕೊಂಡಮೇಲೇ ನಮ್ಮ ಹಣವನ್ನು ಮರುಪಾವತಿ ಮಾಡುತ್ತಿದ್ದುದು. ಅನೇಕ ಹುಡುಗರು ಸುಳ್ಳು ರಸೀತಿ ಕೊಟ್ಟು ಹಣ ಪಡೆಯುತ್ತಾರೆ ಎಂದು ಬ್ಯಾಂಕಿನವರ ಈ ಬಂದೋಬಸ್ತು. ನಾನು ಇವ್ಯಾವುದಕ್ಕೂ ತಲೆಕೆಡಿಸಿಕೊಳ್ಳದೇ ಅಷ್ಟೂ ರಸೀತಿಗಳನ್ನೂ ಮನೆಗೆ ಕಳಿಸುತ್ತಿದ್ದೆ. ಅಪ್ಪ ಅವನ್ನೆಲ್ಲ ನೀಟಾಗಿ ತಾರೀಖಿಗನುಗುಣವಾಗಿ ಜೋಡಿಸಿ ಒಂದು ಗುಂಡುಪಿನ್ನು ಹಾಕಿ ಬ್ಯಾಂಕಿಗೆ ಕೊಟ್ಟು ಪಡೆದ ದುಡ್ಡನ್ನು ನನಗೆ ಮನಿ ಆರ್ಡರ್ ಮಾಡುತ್ತಿದ್ದರು. ಇದೊಂತರಾ ಕೊಂಕಣ ಸುತ್ತುವ ಬ್ಯೂರಾಕ್ರಸಿ. 'ನಮ್ಮ ದುಡ್ಡು ನಮಗೆ ಕೊಡುವುದಕ್ಕೆ ಇವರದೆಂತ ರಗಳೆ' ಎಂದು ಅಪ್ಪ ಆಗಾಗ ಗೊಣಗಿಕೊಳ್ಳುತ್ತಿದ್ದರು.

ಅಂದು ನಮ್ಮ ಕಾಲೇಜಿನ ಅರೆವಾರ್ಷಿಕ ಫೀಸು ಐವತ್ತು ರೂಪಾಯಿ ಕಟ್ಟಿ ಅದರ ರಸೀತಿ ಪಡೆದಿದ್ದೆ. ಕಾರ್ಬನ್ ಪೇಪರಿಟ್ಟು ರಸೀತಿ ಬರೆಯುತ್ತಿದ್ದ ಕಾಲವದು. ರಸೀತಿಯ ಮೇಲೆ ನನ್ನ ಹೆಸರು ಬರೆಯುವುದನ್ನು ರಾಘವಾಚಾರಿ ಮರೆತಿದ್ದ. ಅದು ನನಗೆ ಗೊತ್ತಾದದ್ದು ಹಾಸ್ಟೆಲಿನ ನನ್ನ ರೂಮಿಗೆ ಹೋದಮೇಲೆಯೇ. ತಿಳಿದ ತಕ್ಷಣ ನಾನು ಅದನ್ನು ಸರಿಪಡಿಸಿಕೊಳ್ಳಲು ವಾಪಸ್ಸು ಆಫೀಸಿಗೆ ಹೋಗುವ ಹೊತ್ತಿಗೆ ರಾಘವಾಚಾರಿ ಆಫೀಸಿನ ಬಾಗಿಲು ಹಾಕಿ ಮನೆಗೆ ಹೊರಡಲು ಸಿದ್ಧವಾಗಿದ್ದ. ಆತನಿಗೆ ನನ್ನ ರಸೀತಿಯ ಪ್ರತಿ ತೋರಿಸಿ ಆಗಿದ ತಪ್ಪನ್ನು ತಿಳಿಸಿದಾಗ ಮತ್ತೆ ಬೀಗ ತೆಗೆದು, ರಸೀತಿ ಪುಸ್ತಕದಲ್ಲಿ ಅದೇ ನಂಬರಿನ ರಸೀತಿಯ ಅಡಿಯಲ್ಲಿ ಕಾರ್ಬನ್ ಕಾಗದ ಇಟ್ಟು ಈ ಡೂಪ್ಲಿಕೇಟ್ ರಸೀತಿಯನ್ನಿಟ್ಟು ಬರೆಯುವ ರಗಳೆಗೆ ಹೋಗದೇ ಆ ಕಾರ್ಬನ್ ಪ್ರತಿಯ ಮೇಲೇ ಪೆನ್ನಿನಿಂದ ನನ್ನ ಹೆಸರು ಬರೆದು ಕೊಟ್ಟ. ಇದು ಮಹಾಪ್ರಮಾದವೆಂದು ನನಗೂ ಆಗ ಗೊತ್ತಾಗಲಿಲ್ಲ. ನಾನು ಅದೇ ರಸೀತಿಯನ್ನು ಮನೆಗೆ ಕಳಿಸಿದ್ದೆ. ಅದನ್ನು ಬ್ಯಾಂಕಿಗೆ ಅಪ್ಪ ತೆಗೆದುಕೊಂಡು ಹೋದಾಗ ಬ್ಯಾಂಕಿನ ಅಕೌಂಟೆಂಟು ಅದನ್ನು ನಿರಾಕರಿಸಿದ್ದಲ್ಲದೇ 'ನಿಮ್ಮಗ ಯಾರದೋ ಡೂಪ್ಲಿಕೇಟ್ ರಸೀತಿಯ ಮೇಲೆ ತನ್ನ ಹೆಸರನ್ನು ತಾನೇ ಬರೆದುಕೊಂಡು ಬ್ಯಾಂಕಿಗೆ ಕಳಿಸಿದ್ದಾನೆ. ಅವನ ಮೇಲೆ ಫ್ರಾಡ್ ಅಂತ ಕೇಸು ಹಾಕ್ತೀನಿ' ಎಂದು ಕೂಗಾಡಿದ್ದಾನೆ. ನಮ್ಮಪ್ಪನಿಗೂ ಈ ಕಾರ್ಬನ್ ಕಾಪಿಯ ಮೇಲೆ ಫೌಂಟನ್ ಪೆನ್ನಿಂದ ನನ್ನ ಹೆಸರು ಯಾಕೆ ಬರೆದಿದೆ ಎಂದು ಅರ್ಥವಾಗಲಿಲ್ಲ. ಅವರಿಗೂ ಸಂಶಯ ಬಂದದ್ದು ನನ್ನ ಮೇಲೆಯೇ. ಐವತ್ತು ರೂಪಾಯಿ ಲೆಕ್ಕ ಸೀದಾ ಮಾಡಲು ಎಪ್ಪತ್ತು ರೂಪಾಯಿ ಬಸ್‌ಚಾರ್ಜು ಕೊಟ್ಟುಕೊಂಡು ನಾಗಮಂಗಲದಿಂದ ಬಳ್ಳಾರಿಗೆ ಬಂದಿದ್ದಾರೆ.

ಮೆಡಿಕಲ್ ಕಾಲೇಜಿನಲ್ಲಿ ಇದ್ದುದರಲ್ಲಿಯೇ ನೀಟಾಗಿ ಶರಟು, ಪ್ಯಾಂಟು ಹಾಕಿಕೊಂಡು ಸ್ನೇಹಿತರ ಜತೆ ಓಡಾಡುತ್ತಿರುವಾಗ ಬಟ್ಟೆಯ ಚೀಲ, ಮಾಸಲು ಪ್ಯಾಂಟು, ಶರಟು ಹಾಕಿಕೊಂಡ ಅಪ್ಪ ಇದ್ದಕ್ಕಿದ್ದಂತೆ ಪ್ರತ್ಯಕ್ಷವಾಗಿ 'ಪ್ರಸಾದೂ' ಎಂದು ಕೂಗಿದಾಗ ನಾನು ಅತ್ತಿತ್ತ ನೋಡಿ ನನ್ನ ಕೂಲ್‌ಗಿರಿಗೆ ಅಪಚಾರವಾಗಿಲ್ಲ ಎಂದು ದೃಢಪಡಿಸಿಕೊಂಡು ಮೆತ್ತಗೆ ಅಪ್ಪನನ್ನು ಪಕ್ಕಕ್ಕೆ ಕರಕೊಂಡು ಹೋಗಿ ಪಿಸುಮಾತಿನಲ್ಲಿ 'ಇಲ್ಲಿಗ್ಯಾಕೆ ಬಂದದ್ದು?' ಎಂದು ಕೇಳಿದ್ದೆ. ಅಪ್ಪನ ಹಣೆಯ ಮೇಲಿನ ಬೆವರು ಬರೀ ಬಳ್ಳಾರಿಯ ಬಿಸಿಲಿನಿದ್ದಲ್ಲ ಎಂದು ನನಗೆ ಅರ್ಥವಾಗಿತ್ತು. ಅವರ ಮನಃಸ್ಥಿತಿಗೆ ವಿರುದ್ಧವಾಗಿ ಹೆದರಿದ್ದು ನನ್ನ ಗಮನಕ್ಕೆ ಬಂತು. 'ಪ್ರಸಾದು, ಎಲ್ಲರೂ ತಪ್ಪು ಮಾಡ್ತಾರೆ. ನೀನು ನನ್ನಿಂದ ತಪ್ಪಾಗಿದೆ ಎಂದು ಒಂದು ಪತ್ರ ಬರೆದುಕೊಟ್ಟುಬಿಡು. ನಾನು ಬ್ಯಾಂಕ್ ಮ್ಯಾನೇಜರ್ ಹತ್ತಿರ ಹೋಗಿ ಕೇಳಿಕೊಳ್ಳುತ್ತೀನಿ. ಅವರು ಎಲ್ಲ ಸರಿ ಮಾಡ್ತಾರೆ' ಎಂದೇ ಮಾತು ಶುರುಮಾಡಿದ್ದರು.